ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ನೇ ಪ್ರತಿವಾದಿ ಪರ ಶ್ರೀ ಡಿ.ಎಂ.ಎಂ. ವಕೀಲರಿಂದಃ-

ದಾವಾ ಆಸ್ತಿಯ ಎಷ್ಟು ಮೊತ್ತಕ್ಕೆ ಕರಾರು ಪತ್ರವನ್ನು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ರೂ 96 ಲಕ್ಷ ಚಿಲ್ಲರೆ ಮೊತ್ತಕ್ಕೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರವನ್ನು ದಿನಾಂಕ 19.01.2007 ನ್ನು ಮಾಡಿಕೊಂಡಿರುತ್ತೇನೆ. ಸಾಕ್ಷಿಗೆ ಸದರಿ ಕರಾರು ಪತ್ರದಲ್ಲಿ ನೋಂದಾಯಿತ ಕ್ರಯ ಪತ್ರವನ್ನು ಮಾಡಿಕೊಳ್ಳಲು ಎಷ್ಟು ಕಾಲಾವಧಿ ನಿಗಧಿಪಡಿಸಲಾಗಿತ್ತು ಎಂದರೆ ಸಾಕ್ಷಿಯು extact time duration ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಅಂದಾಜು ಎಷ್ಟು ದಿನಗಳಿಗೆ ನಿಗಧಿಪಡಿಸಲಾಗಿತ್ತು ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ನಿಡಿ-18 ರ ದಾಖಲೆಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾರಾಟದ ಕ್ರಯದ ಕರಾರು ಪತ್ರವಾಗಿರಲಿಲ್ಲ ಅದೇ ಕಾರಣ ನಿಮಗೆ ನಿಗಧಿಪಡಿಸಿದ ಸಮಯ ನೆನಪಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಕರಾರು ಪತ್ರದಲ್ಲಿ ನಿಗಧಿಪಡಿಸಿದ ಕಾಲಾವಧಿಯ ಒಳಗೆ ಕ್ರಯ ಪತ್ರವನ್ನು ಬರೆದುಕೊಡುವಂತೆ ಪ್ರಯತ್ನ ಮಾಡಿರುತ್ತೀರಾ ಎಂದರೆ ಸಾಕ್ಷಿ ಹೌದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಕ್ರಯ ಪತ್ರವನ್ನು ಬರೆದುಕೊಡುವಂತೆ ಬರವಣಿಗೆಯ ಮೂಲಕ ದಾಖಲಾತಿಗಳನ್ನು ಒದಗಿಸಿ ಕೇಳಿರುತ್ತೀರಾ ಎಂದರೆ ಸಾಕ್ಷಿಯ ಬರವಣಿಯ ಮೂಲಕ ಕೇಳಿರುವುದಿಲ್ಲ ಆದರೆ ಮೌಖಿಕವಾಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದಿ 1 ಮತ್ತು 2 ರವರಿಗೆ ಮೌಖಿಕವಾಗಿ ಕ್ರಯ ಪತ್ರ ಬರೆದುಕೊಡುವಂತೆ ಯಾವತ್ತು ಕೇಳಿರುತ್ತೀರಾ ಎಂದರೆ ಸಾಕ್ಷಿಯು

ದಿನಾಂಕ ಜ್ಞಾಪಕ ಇರುವುದಿಲ್ಲ ಆದರೆ ಕರಾರು ಪತ್ರವಾದ 3 ತಿಂಗಳ ನಂತರ ಹಲವಾರು ಬಾರಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಅದಕ್ಕೆ 1 ಮತ್ತು 2ನೇ ಪ್ರತಿವಾದಿರವರು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿರುತ್ತೇವೆ ಭೂ ಪರಿವರ್ತನೆಯಾದ ನಂತರ ಮಾಡಿಕೊಡುತ್ತೇವೆ ಎಂದು ತಿಳಿಸಿರುತ್ತಾರೆ. ಸದರಿ ವಿಚಾರವಾಗಿ 1 ಮತ್ತು 2ನೇ ಪ್ರತಿವಾದಿರವರ ಬಳಿ ಲಿಖಿತವಾಗಿ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಗೆ 1 ಮತ್ತು 2ನೇ ಪ್ರತಿವಾದಿಗಳ ಬಳಿ ಭೂ ಪರಿವರ್ತನೆ ಮಾಡಿಸಿ ಕ್ರಯ ಪತ್ರವನ್ನು ಮಾಡಿಕೊಂಡುವಂತೆ ಲಿಖಿತವಾಗಿ ಡಿಮ್ಯಾಂಡ್ ನೋಟಿಸ್ ನೀಡಿ ಕೇಳಿರುತ್ತೀರಾ ಎಂದರೆ ಲಿಖಿತವಾಗಿ ಡಿಮ್ಯಾಂಡ್ ನೋಟಿಸ್ ನೀಡಿ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಡಿ-18 ರ ಕ್ರಯದ ಕರಾರು ಪತ್ರವಾದ ಆಧಾರದ ಮೇಲೆ ನಿಡಿ-19 ನ್ನು ಸಾಮಾನ್ಯ ಅಧಿಕಾರ ಪತ್ರವನ್ನು ನೀವು ಸೃಷ್ಟಿಸಿರುತ್ತೇನೆ ಎಂದರೆ ಸಾಕ್ಷಿಯು ಸೃಷ್ಟಿಸಿರುವ ಪದ ಸುಳ್ಳು ಎಂದು ನುಡಿಯುತ್ತಾರೆ. ನಿಡಿ-19 ರ ಸಾಮಾನ್ಯ ಅಧಿಕಾರ ಪತ್ರದಲ್ಲಿ ಏನೆಲ್ಲಾ ಅಧಿಕಾರಗಳನ್ನು ಬರವಣಿಯಾಗಿರುತ್ತದೆ ಎಂದರೆ ಸಾಕ್ಷಿಯು ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನಿಡಿ-19 ರ ಸಾಮಾನ್ಯ ಅಧಿಕಾರ ಪತ್ರದ ಪ್ರಕಾರ ನೀವೇ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿಕೊಂಡು ಇತರೆ ಎಲ್ಲಾ ವ್ಯವಹಾರಗಳನ್ನು ಮಾಡಲು ಅದರಲ್ಲಿ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ನಮಗೂ ಸಹ ಅಧಿಕಾರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಡಿ-19 ರ ಸಾಮಾನ್ಯ ಅಧಿಕಾರ ಪತ್ರದ ಪ್ರಕಾರ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಲು

ಸಂಬಂಧಪಟ್ಟ ಪದಾಧಿಕಾರಕ್ಕೆ ಅರ್ಜಿಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಹೌದು ಅರ್ಜಿಯನ್ನು ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು/ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ಅರ್ಜಿಯಂತೆ ದಾವಾ ಆಸ್ತಿಯು ಭೂ ಪರಿವರ್ತನೆಗೊಂಡಿರುತ್ತದೆಯೇ ಎಂದರೆ ಸಾಕ್ಷಿ ಪರಿವರ್ತನೆಗೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಯಾವ ಕಾರಣಕ್ಕಾಗಿ ಭೂ ಪರಿವರ್ತನೆಯಾಗಿರುವುದಿಲ್ಲ ಎಂದು ಹಿಂಬರಹ ನೀಡಿರುತ್ತಾರಾ ಎಂದರೆ ಸಾಕ್ಷಿಯು ಹಿಂಬರಹವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಯಾವ ದಿನಾಂಕ ನೀಡಿರುತ್ತೀರಾ ಮತ್ತು ಹಿಂಬರಹವನ್ನು ಯಾವ ದಿನಾಂಕ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ದಿನಾಂಕ ನನಗೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹಿಂಬರಹವದಲ್ಲಿ ಭೂ ಪರಿವರ್ತನೆ ಮಾಡಲು ಏಕೆ ಸಾಧ್ಯವಾಗುವುದಿಲ್ಲ ಎಂದು ಯಾವ ಕಾರಣವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರವಾದ ಎಷ್ಟು ದಿನಗಳ ನಂತರ ಭೂ ಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ಅದಕ್ಕೆ ಪ್ರತಿಯಾಗಿ 3 ನೇ ಪ್ರತಿವಾದಿ ಪರ ವಕೀಲರು ನಿಖರವಾದ ದಿನಾಂಕ ಹೇಳಲು ಸಾಧ್ಯವಿಲ್ಲವಾದರೆ ಅಂದಾಜು ಎಷ್ಟು ದಿನಗಳ ಒಳಗೆ ಭೂ ಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಪುನಃ ನನಗೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ

ಅರ್ಜಿಯನ್ನು ಭೂ ಪರಿವರ್ತನೆ ಮಾಡಲು ನೀಡಿರುವುದಿಲ್ಲ ಮತ್ತು ಹಿಂಬರಹವನ್ನು ಪಡೆದುಕೊಂಡಿಲ್ಲದೇ ಇದ್ದರೂ ಸಹ ಅರ್ಜಿಯನ್ನು ನೀಡಿರುತ್ತೇನೆ ಮತ್ತು ಹಿಂಬರಹವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಪಿ-18 ರ ಕ್ರಯದ ಕರಾರು ಪತ್ರವಾದ ಎಷ್ಟು ದಿನಗಳ ನಂತರ ನಿಡಿ-21 ರಂತೆ 2 ನೇ ಕರಾರು ಪತ್ರವಾಗುವ ಸಮಯದಲ್ಲಿ ನೀವು ಭೂ ಪರಿವರ್ತನೆಗೆ ಅರ್ಜಿಯನ್ನು ಸಲ್ಲಿಸಿರುತ್ತೀರಾ ಅಥವಾ ಸದರಿ ಕರಾರು ಪತ್ರವಾದ ನಂತರ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಜ್ಞಾಪಕ ಇಲ್ಲ ಎಂದು ನುಡಿಯುತ್ತಾರೆ.

2 ನೇ ಕರಾರು ಪತ್ರವು ದಿನಾಂಕ 06.03.2009 ರಂದು ಆಗಿರುತ್ತದೆ. ಯಾವ ಉದ್ದೇಶಕ್ಕಾಗಿ 2 ನೇ ಕರಾರು ಪತ್ರವನ್ನು ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು 1 ಮತ್ತು 2 ನೇ ಪ್ರತಿವಾದಿಗಳಿಗೆ ನಾವು ತುಂಬಾ ಹಣವನ್ನು ನೀಡಿದ್ದೆವು ಅದು ಕೇವಲ 200 ರೂಪಾಯಿಯ ಛಾಪಾಕಾಗದಲ್ಲಿ ಬರೆಯಲಾಗಿತ್ತು, ಹಿಂದಿನ ಕರಾರು ಪತ್ರ ನಿಡಿ-18 ರ ಕರಾರು ಪತ್ರದಲ್ಲಿ ಕ್ರಯದ ಮೊತ್ತ ಹೆಚ್ಚಾಗಿತ್ತು ಮತ್ತು 2 ನೇ ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಮಾರುಕಟ್ಟೆ ದರ ಕಡಿಮೆಯಾಗಿರುವುದರಿಂದ ನಾವು ಮತ್ತು 1 ಮತ್ತು 2 ನೇ ಪ್ರತಿವಾದಿ ಸೇರಿ ಮಾತುಕತೆ ಮಾಡಿ ನೋಂದಾಯಿತ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-19 ರ ಕರಾರು ಪತ್ರದಲ್ಲಿ ರೂ.200/- ಛಾಪಾಕಾದಗಲ್ಲಿ ಕ್ರಯದ ಮೊತ್ತ ಹೆಚ್ಚು ಇದ್ದುರಿಂದ ಅದರ ಭದ್ರತೆಗಾಗಿ ನಿಡಿ-21 ರಂತೆ 2 ನೇ ಕರಾರು ಪತ್ರವನ್ನು

ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಕಾಲ ಕಾಲಕ್ಕೆ ಹಣ ಕೊಟ್ಟಿರುವ ಬಗ್ಗೆ ಅದರ ಭದ್ರತೆಗಾಗಿ ದಾಖಲೆಗಳನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿ. ನಿಡಿ-21 ರ ಕರಾರು ಪತ್ರದಲ್ಲಿ ಈ ಹಿಂದೆ ನಿಡಿ-18 ರ ಕರಾರು ಪತ್ರ ಮಾಡಿಕೊಂಡಿದ್ದು ಮತ್ತು ಈಗ ಸ್ವತ್ತಿನ ಬೆಲೆ ಕಡಿಮೆಯಾಗಿದ್ದರಿಂದ ಸದರಿ ಕರಾರು ಪತ್ರವನ್ನು ಬರೆಸಿಕೊಳ್ಳುತ್ತಿದ್ದೇನೆ ಎಂದು ಅದರಲ್ಲಿ ನಮೂದು ಇರುತ್ತದೆಯೇ ಎಂದರೆ ಸಾಕ್ಷಿಯು ಆ ಬಗ್ಗೆ ನಿಡಿ-21 ರಲ್ಲಿ ನಮೂದು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-21 ರ ಕರಾರು ಪತ್ರದಲ್ಲಿ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದ ಬಗ್ಗೆ ಮತ್ತು ಯಾವ ಕಾರಣಕ್ಕಾಗಿ ಪರಿವರ್ತನೆಯಾಗಿಲ್ಲದಿರುವ ಬಗ್ಗೆ ಹಿಂಬರಹ ಕೊಟ್ಟ ಬಗ್ಗೆ ಒಕ್ಕಣೆಯನ್ನು ಬರೆಯಲಾಗಿರುತ್ತದೆಯೇ ಎಂದರೆ ಸಾಕ್ಷಿಯು ನಿಡಿ-21 ಓದಿ ನೋಡಿ ಅದರ ಬಗ್ಗೆ ಬರೆದಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಕ್ತಾಯವಾಗಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.